# ಬೀಸಣಿಕೆ ಹಕ್ಕಿ ಸುಖ ಸಂಸಾರ

★ಚಿತ್ರ- ಬರಹ: ಎಂ.ಆರ್.ಮಂಜುನಾಥ್

ಕಾಡು ಮೇಡುಗಳನ್ನು ಸುತ್ತಿದರೂ ಈ ಬೀಸಣಿಕೆ ಬಾಲದ ಹಕ್ಕಿಯ ಸಂಸಾರ ಒಂದೂ ಗೋಚರಿಸಲಿಲ್ಲ. ಈ ಹಕ್ಕಿಗಳದ್ದೇ ವಿಚಿತ್ರ. ಗೂಡು ಕಟ್ಟಲು ಏನು ಸಿಕ್ಕರೂ ಆದೀತು ಎನ್ನುವಂತೆ. ಕೆಲವು ಪೊಟ್ಟರೆಗಳನ್ನು ಆಶ್ರಯಿಸಿದರೆ, ಇನ್ನು ಕೆಲವು ನೆಲದಲ್ಲೇ ಗೂಡು ಕಟ್ಟುತ್ತವೆ. ತಟ್ಟೆ, ಬಟ್ಟಲು, ಕಾಫಿ ಕಪ್‌ನಂತೆ ಒಣ ಹುಲ್ಲು, ಎಲೆ ಹತ್ತಿ, ಜೇಡರ ಬಲೆಗಳಿಂದ ತಯಾರಾದ ಮೆದುವಾದ ಗೂಡುಗಳೂ ಇರುತ್ತವೆ. ಇವತ್ಯಾಕೋ ಇವುಗಳ ಸುಳಿವೇ ಇಲ್ಲವಲ್ಲ!

ಕೊನೆಗೂ ಬಿದಿರಿನ ಪೊದೆಗಳ ಮಧ್ಯೆ ಎರಡು ಕವಲು ಕಡ್ಡಿಗಳ ನಡುವೆ ಸುಂದರ ಕಾಫಿ ಕಪ್ಪಿನ ಆಕಾರದಲ್ಲಿ ನಾರು– ಬೇರು ಬಳಸಿ ಜೇಡರ ಬಲೆಯಲ್ಲಿ ಅಂಟಿಸಿದ ಅಚ್ಚುಕಟ್ಟಾದ ಗೂಡೊಂದು ಕಣ್ಣಿಗೆ ಬಿತ್ತು. ಅದರೊಳಗೆ ಮೊಟ್ಟೆ ಇದೆಯಾ? ಮೊಟ್ಟೆ ಇದ್ದರೆ ತಾಯಿ ಕಾಣಿಸಬೇಕಿತ್ತಲ್ಲ? ಸ್ವಲ್ಪ ಸಮಯವಾದರೂ ಹಕ್ಕಿಗಳು ಬರಲಿಲ್ಲವಲ್ಲ ಎಂದು ಆತಂಕದಿಂದ ಅದರ ಸಮೀಪಕ್ಕೆ ಹೋದರೆ ಎಲ್ಲಿಂದಲೋ ಹಕ್ಕಿಗಳು ಕಿರುಚಾಡುತ್ತಾ ಬಂದು ಮೈಮೇಲೆ ಎರಗಿದವು. ಅಂದರೆ, ಮೊಟ್ಟೆ ಇದೆಯೆನ್ನುವುದು ಖಚಿತ.

ಅವತ್ತು ಅಲ್ಲಿಂದ ಬಂದು ಪ್ರತಿದಿನ ಒಂದು ರೌಂಡ್ ಹಾಕತೊಡಗಿದೆ. ಬೀಸಣಿಕೆ ಹಕ್ಕಿಯ ಸಂಸಾರದ ಹಲವು ಹೊಳಹುಗಳು ಸಿಕ್ಕಿದವು. ಈ ಹಕ್ಕಿಯು ನಾಯಿ, ಬೆಕ್ಕು, ಕಾಗೆ, ಹದ್ದುಗಳ ಬಾಯಿಗೆ ಸಿಗದ ಹಾಗೆ ಎರಡು ಕಡ್ಡಿಗಳ ನಡುವೆ ತೂಗು ಗೂಡನ್ನು ನಿರ್ಮಿಸುತ್ತದೆ. ಈ ಬಿಳಿ ಹುಬ್ಬಿನ ಗಂಡು– ಹೆಣ್ಣು ಹಕ್ಕಿಗಳು ಗೂಡನ್ನು ಕಟ್ಟುವುದರಿಂದ ಹಿಡಿದು ಮರಿಗಳ ಪೋಷಣೆವರೆಗೆ ಎಲ್ಲ ಕೆಲಸಗಳನ್ನೂ ಸಮನಾಗಿ ಹಂಚಿಕೊಂಡು ಮಾಡುತ್ತವೆ. ಒಂದು ಸಲ ಹೆಣ್ಣು ಮೊಟ್ಟೆಗಳ ಮೇಲೆ ಕೂತು ಕಾವು ಕೊಡುತ್ತಿದ್ದರೆ, ಗಂಡು ಆಹಾರ ಹುಡುಕಿ ಹೊರಟುಹೋಯಿತು. ಸ್ವಲ್ಪ ಹೊತ್ತಿನ ಬಳಿಕ ಹೊಟ್ಟೆ ತುಂಬ ತಿಂದು ವೈಯಾರದಿಂದ ಬಾಲ ಅಲ್ಲಾಡಿಸುತ್ತಾ ಬಂತು. ಬಳಿಕ ಹೆಣ್ಣು ಹಕ್ಕಿ ಆಹಾರ ಹುಡುಕಿಕೊಂಡು ಹೋಯಿತು.

ಮೋಹಕವಾದ ಬೀಸಣಿಕೆಯಂಥ ಬಾಲ ಇರುವ ಸಣ್ಣ ಗಾತ್ರದ ಈ ಹಕ್ಕಿಗಳಲ್ಲಿ ಗಂಡು– ಹೆಣ್ಣು ಎರಡೂ ನೋಡಲು ಒಂದೇ ರೀತಿ ಇರುತ್ತವೆ. ಉದ್ದ ಕೇವಲ 17 ಸೆಂ.ಮೀ ನಷ್ಟು. ಹಣೆ ಮೇಲೆ ಬಿಳಿ ಹುಬ್ಬುಗಳು ಮೇಕಪ್ ಮಾಡಿದ ಹಾಗೆ! ಗಲ್ಲ ಕಪ್ಪು. ಬಿಳಿ ಕೆಳ ಮೈ ಹಾಗೂ ರೆಕ್ಕೆ ಮೇಲೆ ಎರಡು ಬಿಳಿ ಪಟ್ಟೆಗಳು ಕಂಡು ಬರುತ್ತವೆ. ಗಾಳಿಯಲ್ಲಿ ಸರ್ಕಸ್ ಮಾಡುತ್ತಾ ಹಾರುತ್ತಿರುವ ಹುಳಗಳನ್ನು ಹಿಡಿಯುವಾಗ ಕೆಲವೊಮ್ಮೆ ಬಾಲವನ್ನು ಬೀಸಣಿಗೆಯಂತೆ ಹರಡುತ್ತವೆ. ಇಂಗ್ಲಿಷ್ ಹೆಸರು– ವೈಟ್ ಬ್ರೋಡ್ ಫ್ಯಾನ್ಟೇಲ್ ಫ್ಲೈ ಕ್ಯಾಚರ್. (ಬೀಸಣಿಕೆ ಬಾಲದ ಹಕ್ಕಿ) ಸಂತಾನೋತ್ಪತ್ತಿ ಸಮಯದಲ್ಲಿ 3ರಿಂದ 4 ಕೆನೆ ಬಣ್ಣದ ಮೊಟ್ಟೆಗಳಿಗೆ ಸುಮಾರು 17 ದಿನಗಳವರೆಗೆ ಕಾವುಕೊಟ್ಟು ಮರಿ ಮಾಡುತ್ತವೆ.

ಬನ್ನೇರುಘಟ್ಟ, ಸಾವನದುರ್ಗಗಳಲ್ಲಿ ಕಂಡು ಬರುವ ಈ ಹಕ್ಕಿಯ ಸಂಸಾರದ ಚಿತ್ರಗಳನ್ನು ತೆಗೆಯುವುದು ಕಷ್ಟದ ಕೆಲಸವೇ. ಸೂಕ್ತ ಬೆಳಕು ಸಿಗುವುದಿಲ್ಲ. ಕೊನೆಗೂ ಮರಿಗೆ ಗುಟುಕು ಕೊಡುವ ಚಿತ್ರ ಸಿಕ್ಕಾಗ ಅಷ್ಟು ದಿನ ಪಟ್ಟ ಶ್ರಮ ಸಾರ್ಥಕ ಎನ್ನಿಸಿತು.





